ಅಸಲು ದಾವಾ.ನಂ. 206/2024
ಪಿ ಡಬ್ಲ್ಯೂ-1

ದಿನಾಂಕಃ 23-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಜೆವಿ ವಕೀಲರಿಂದ:</u>

ನಿಪಿ-8 ರಿಂದ 20 ರಲ್ಲಿ ಹೇಳಿದ ಆಸ್ತಿಗಳು ನಮ್ಮ ಕುಟುಂಬದ ಜಂಟಿ ವಹಿವಾಟಿನ ಆಸ್ತಿಗಳು ಎಂದರೆ ಸರಿ. ಸದರಿ ದಾಖಲೆಗಳಲ್ಲಿ ನನ್ನ ಹೆಸರಿನಲ್ಲಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಆದಾಯ ಇರುತ್ತದೆ ಎಂದು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ 10 ಲಕ್ಷ ರೂಪಾಯಿ ಕೈಗಡ ಸಾಲ ರೂಪಾದಲ್ಲಿ ಕೊಡುವ ಶಕ್ತಿ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. 10 ಲಕ್ಷ ರೂಪಾಯಿ ಪ್ರತಿವಾದಿಗೆ ನನ್ನ ಮನೆಯಿಂದ ತಂದು ಕೊಟ್ಟಿರುತ್ತೇನೆ. ನಮ್ಮ ಜಮೀನಿನಲ್ಲಿ ಬೆಳೆದ ಕಬ್ಬಿನ್ನು ಗಾಣಕ್ಕೆ ಕಳುಹಿಸಿದ್ದೆವು, ಅದರಿಂದ ಬಂದ ಹಣವನ್ನು ಮನೆಯಲ್ಲಿಟ್ಟಿದ್ದೆ, ಅದನ್ನು ಕೊಟ್ಟಿರುತ್ತೇನೆ. ಕಬ್ಬು ಸರಬರಾಜು ಮಾಡಿದ ಹಣ ಮನೆಯಲ್ಲಿತ್ತು, ಅದನ್ನು 1 ನೇ ಪ್ರತಿವಾದಿಯ ಗಂಡ ಹಾಗೂ ಇತರ ಪ್ರತಿವಾದಿಯರ ತಂದೆಗೆ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಶ್ರೀಶೈಲ್ ಹೊಸಕೋಟಿ ಇವರು ವಿ.ಎಸ್. ಹೂಗಾರ ವಕೀಲರ ಮೂಲಕ 2008 ರಲ್ಲಿ ಪರಿಚಯ ಆಗಿರುತ್ತಾನೆ. ಸದರಿ ಶ್ರೀಶೈಲ್ ಹೊಸಕೋಟಿ ಇವರಿಗೆ ಸೇರಿದ ಟ್ರಕ್ ಗಳು ಇದ್ದವು, ಅವುಗಳನ್ನು ಬಾಡಿಗೆಗೆ ಕೊಡುತ್ತಿದ್ದನು, ಆದ್ದರಿಂದ ಪರಿಚಯವಾಗಿರುತ್ತಾನೆ. ದಿನಾಂಕಃ 18-04-2023 ರಂದು ಸದರಿ ಶ್ರೀಶೈಲ್ ಹೊಸಕೋಟಿ ಇವರು 10 ಲಕ್ಷ ರೂಪಾಯಿ ಹಣವನ್ನು ಸಾಲದ ರೂಪದಲ್ಲಿ ಕೊಡುವಂತೆ ಕೇಳಿದ್ದನು, ಅದೇ ದಿನ ನಾನ ಕೊಟ್ಟಿರುತ್ತೇನೆ. ಆ ದಿನ ಸಂಜೆ 06-00 ಗಂಟೆ ಸುಮಾರಿಗೆ ಯಕ್ಸಂಬಿ ವಕೀಲರ ಕಛೇರಿಯಲ್ಲಿ 10 ಲಕ್ಷ ರೂಪಾಯಿ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ನಾನು, ಶ್ರೀಶೈಲ್ ಹೊಸಕೋಟಿ, ರಮೇಶ ಯಕ್ಸಂಬಿ, ವಕೀಲರು ಮತ್ತು ವಿ.ಎಸ್. ಹೂಗಾರ ವಕೀಲರು ಹಾಜರಿದ್ದೆವು. ನಾನು ಸದರಿ ಶ್ರೀಶೈಲ್ ಇವರಿಗೆ ಇಷ್ಟು ದೊಡ್ಡ ಮೊತ್ತ ಯಾವ ಕಾರಣಕ್ಕಾಗಿ ಬೇಕಾಗಿದೆ ಎಂದು ಕೇಳಿದಾಗ ಕುಟುಂಬದ ಅಡಚಣೆ ಇದೆ ಎಂದು ಹೇಳಿದ್ದನು. ಯಾವ ಅಡಚಣೆ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಮೊತ್ತಕ್ಕೆ ಬಡ್ಡಿ ಮಾತುಕತೆಯಾಗಿರುವುದಿಲ್ಲ.

ನಾನು 2007 ರಿಂದ ವಕೀಲ ವೃತ್ತಿಯಲ್ಲಿ ತೊಡಗಿದ್ದು, ಸಾಕಷ್ಟು ಹಣ ವಸೂಲಾತಿ ಪ್ರಕರಣ ಹಾಗೂ ಇತರ ಪ್ರಕರಣಗಳನ್ನು ನಡೆಸಿರುತ್ತೇನೆ. ನಾನು ಶ್ರೀಶೈಲ್ ಹೊಸಕೋಟೆ ಅಲ್ಲದೆ, ಇತರರೊಂದಿಗೆ ಹಣದ ವ್ಯವಹಾರ ಮಾಡಿರುತ್ತೇನೆ. ನಾನು ಇತರರೊಂದಿಗೆ ಮಾಡಿದ ಹಣದ ವ್ಯವಹಾರಕ್ಕಾಗಿ ಪ್ರಾಮಿಸರಿ ನೋಟ್ ಬರೆಸಿಕೊಂಡಿರುತ್ತೇನೆ. ನನ್ನ ವಾದ ಪತ್ರ ಕಂಡಿಕೆ 2 ರಲ್ಲಿ ಸದರಿ ಶ್ರೀಶೈಲ್ ಹೊಸಕೋಟೆ ಇವರು ದಸ್ತಾವೇಜು ಬರಹಗಾರರ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿಯೇ ಹಣ ಪಡೆದು ಸಾಕ್ಷಿದಾರರ ಸಮಕ್ಷಮ 10 ಲಕ್ಷ ರೂಪಾಯಿ ಪ್ರಾಮಿಸರಿ ನೋಟ್ ಬರೆದುಕೊಟ್ಟಿರುವುದಾಗಿ ಹೇಳಿರುತ್ತೇನೆ ಎಂದರೆ ಸರಿ. ಯಕ್ಸಂಬಿ ವಕೀಲರು ನಿಪಿ-1 ರ ಪ್ರಾಮಿಸರಿ ನೋಟ್ ಬರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶ್ರೀಶೈಲ್ ಹೊಸಕೋಟೆ ಇವರು ರಮೇಶ ಯಕ್ಸಂಬಿ ವಕೀಲರ ಹತ್ತಿರ ಕರೆದಕೊಂಡು ಹೋಗಿರುವುದರಿಂದ ಸದರಿಯವರು ನಿಪಿ-1 ರ ದಾಖಲೆ ಬರೆದಿರುತ್ತಾರೆ. ರಮೇಶ ಯಕ್ಸಂಬಿ ಯವರು ಇದೇ ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡುತ್ತಾರೆ ಎಂದರೆ ಸರಿ. ಸದರಿಯವರು ಪ್ರಾಮಿಸರಿ ನೋಟ್ ಬರೆಯುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಕೀಲರಿಗೆ ಕನ್ನಡ ಬರೆಯಲು ಸರಿಯಾಗಿ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಇರುವ ಬರವಣಿಗೆ ರಮೇಶ ಯಕ್ಸಂಬಿ ವಕೀಲರ ಬರವಣಿಗೆ ಅಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ರುವ ಬರವಣಿ ಮತ್ತು ಯಕ್ಸಂಬಿ ವಕೀಲರ ಸಹಿ ಇರುವ ಶಾಹಿ ಒಂದೇ ಇರುತ್ತದೆ, ಆದರೆ ವಿ.ಎಸ್. ಹೂಗಾರ, ವಕೀಲರು ಮತ್ತು ಮತ್ತು ಶ್ರೀಶೈಲ್ ಇವರ ಸಹಿಗಳು ಬೇರೆ ಬೇರೆ ಶಾಹಿಯಿಂದ ಇರಬಹುದು ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ದಿನಾಂಕದಲ್ಲಿ 18 ಸಂಖ್ಯೆ ತಿದ್ದುಪಡಿಯಾಗಿದೆ ಎಂದರೆ ಸರಿಯಲ್ಲ. ದಿನಾಂಕಃ 18-04-2023 ರ ಕೆಳಗಡೆ 18 ನೇ ಏಪ್ರಿಲ್ 2023 ನೇ ಇಸ್ವಿ ಎಂದು ನಮೂದು ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ಯಕ್ಸಂಬಿ ವಕೀಲರಿಗೆ ಗೊತ್ತು ಎಂದು ಹೇಳುತ್ತಾರೆ. ನಿಪಿ-1 ರ ದಾಖಲೆಯನ್ನು ನೋಡಿದ ನಂತರ ನಾನು ಮತ್ತು ಹೂಗಾರ ವಕೀಲರು ನೋಡಿರುತ್ತೇವೆ. ನಾನು ದಿನಾಂಕದ ಕೆಳಗಡೆ ಪುನಃ 18 ನೇ ಏಪ್ರಿಲ್ 2023 ನೇ ಇಸ್ವಿ ಎಂದು ಬರೆದಿರುವ ವಿಷಯವನ್ನು ಕೇಳಿರುವುದಿಲ್ಲ. ಮೊದಲೇ ಬರವಣಿಗೆ ನಿಪಿ-1 ರ ದಾಖಲೆಯಲ್ಲಿ ಶ್ರೀಶೈಲ್ ಹೊಸಕೋಟೆ ಇವರ ಸಹಿ ಇತ್ತು ಎಂದರೆ ಸರಿಯಲ್ಲ. ಸದರಿ ಶ್ರೀಶೈಲ್ ಹೊಸಕೋಟೆ ಇವರ ಮರಣದ ನಂತರ ಈ ಪ್ರಕರಣ ದಾಖಲಿಸುವ ಉದ್ದೇಶದಿಂದ ನಿಪಿ-1 ರ

ದಾಖಲೆಯನ್ನು ನಾನು, ವಿ.ಎಸ್. ಹೂಗಾರ ಮತ್ತು ರಮೇಶ ಯಕ್ಸಂಬಿ ವಕೀಲರು ಸೇರಿಕೊಂಡು ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ರಮೇಶ ಯಕ್ಸಂಬಿ ಮತ್ತು ವಿ.ಎಸ್. ಹೂಗಾರ ವಕೀಲರ ಸಮಕ್ಷಮ ಯಾವುದೇ ಹಣದ ವ್ಯವಹಾರ ಆಗಿಲ್ಲ, ಅಲ್ಲದೆ ಯಕ್ಸಂಬಿ ವಕೀಲರು ನಿಪಿ-1 ರ ಬರವಣಿಗೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಶ್ರೀಶೈಲ್ ಹೊಸಕೋಟೆ ಇವರಿಗೆ 10 ಲಕ್ಷ ರೂಪಾಯಿ ಕೊಟ್ಟಿರುತ್ತೇನೆ, ಅವರು ಅದಕ್ಕೆ ನಿಪಿ-1 ರ ದಾಖಲೆ ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಳೆಯ ಪ್ರಾಮಿಸರಿ ನೋಟ್ ಪಡೆದು ಹೊಸದಾಗಿ ನಿಪಿ-1 ನ್ನು ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ಎ ಶ್ರೀಶೈಲ್ ಹೊಸಕೋಟೆ ಇವರ ಸಹಿ ಅಲ್ಲ ಎಂದರೆ ಸರಿಯಲ್ಲ.

ದಿನಾಂಕಃ 18-04-2023 ರಂದು ನನ್ನ ಹತ್ತಿರ 10 ಲಕ್ಷ ರೂಪಾಯಿ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರಡಿಸಿಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನಿಪಿ-1 ರ ದಾಖಲೆ ಹೊರತುಪಡಿಸಿ, ಶ್ರೀಶೈಲ್ ಹೊಸಕೋಟೆ ಇವರಿಗೆ 10 ಲಕ್ಷ ರೂಪಾಯಿ ಸಾಲ ನೀಡಿದ ಬಗ್ಗೆ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನಾನು ಒಬ್ಬ ವಕೀಲ ವೃತ್ತಿಯಲ್ಲಿ ತೊಡಗಿದ್ದು, ಯಾವುದೇ ಆಧಾರವಿಲ್ಲದೆ 10 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದೀರಾ ? ಎಂದರೆ ಸಾಕ್ಷಿ ವಿಶ್ವಾಸದ ಮೇಲೆ ಕೊಟ್ಟಿರುವುದಾಗಿ ಹೇಳುತ್ತಾರೆ. ಶ್ರೀಶೈಲ್ ಹೊಸಕೋಟೆ ಇವರು 10 ಲಕ್ಷ ರೂಪಾಯಿ ಸಾಲದ ರೂಪದಲ್ಲಿ ಕೇಳಿದ ಕುರಿತು ಅವರ ಹೆಂಡತಿ-ಮಕ್ಕಳನ್ನು ವಿಚಾರಣೆ ಮಾಡಿರುವುದಿಲ್ಲ. ನನ್ನಿಂದ ಶ್ರೀಶೈಲ್ ಹೊಸಕೋಟೆ ಯಾವುದೇ ಹಣ ಪಡೆದಿಲ್ಲ ಹಾಗೂ ಸದರಿ ಹಣ ಪ್ರತಿವಾದಿಯರಿಗೆ ಮುಟ್ಟಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸದರಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA
Digitally signed by ASHAPPA
Date: 2025.09.23 16:48:48 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾ.ದಂ.ಗಳು, ಬನಹಟ್ಟಿ